2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**115/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸರೋಜ | ಪಿಡಬ್ಲ್ಯೂ - 6 |
| ಗಂಡನ ಹೆಸರು | - | ಬಸವರಾಜು | ಸಿಡಬ್ಲ್ಯೂ - 8 |
| ವಯಸ್ಸು | - | 32 ವರ್ಷ | |
| ಉದ್ಯೋಗ | - | ಗೃಹಿಣಿ | |
| ವಾಸ ಸ್ಥಳ | - | ಕೋಟೆ, ಚಿಕ್ಕಮಗಳೂರು | |

ದಿನಾಂಕಃ 20-04-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ಚಾಸಾ.10 ರಾಜೇಗೌಡ ಇವರು ನನ್ನ ಅತ್ತಿಗೆಯ ಗಂಡ ಇರುತ್ತಾರೆ. ಚಾಸಾ.9 ಇವರು ನನ್ನ ಅತ್ತಿಗೆ, ಅವರ ಹೆಸರು ಮಂಜುಳಾ. ನನ್ನ ಅತ್ತಿಗೆ ಮತ್ತು ರಾಜೇಗೌಡ ಇವರಿಗೆ 4 ಜನ ಮಕ್ಕಳು ಇರುತ್ತಾರೆ. ಚಾಸಾ.1 ಕಾವ್ಯಶ್ರೀ ಇವರು ಅವರಿಗೆ 2 ನೇ ಮಗಳು. ಕಾವ್ಯಶ್ರೀ ಯನ್ನು ಹುಚ್ಚೇಗೌಡರ ಮಗ ಸುಪ್ರೀತ್ ಈತನಿಗೆ ಮದುವೆ ಮಾಡಿಕೊಟ್ಟಿರಲಾಗಿರುತ್ತದೆ. ಸದರಿ ಸಂಬಂಧವನ್ನು ಹುಚ್ಚೇಗೌಡರ ಸ್ನೇಹಿತರಾದ ಅಜ್ಜೇಗೌಡ ಇವರು ತೋರಿಸಿರುತ್ತಾರೆ. ಅಜ್ಜೇಗೌಡ ಇವರು ನಮಗೆ ಸಂಬಂಧಿಕರಾಗಿರುತ್ತಾರೆ. ಮದುವೆ ಮತುಕತೆಯ ಸಮಯದಲ್ಲಿ ಆರೋಪಿಗಳು 500gm ಚಿನ್ನವನ್ನು ಕೇಳಿದ್ದರು. ಅದಕ್ಕೆ ಅಷ್ಟು ಚಿನ್ನವನ್ನು ಕೊಡಲು ಆಗುವುದಿಲ್ಲ ಎಂದು ರಾಜೇಗೌಡ ಇವರು ಹೇಳಿರುತ್ತಾರೆ. ನಂತರ ಹುಡುಗಿಗೆ 2 ಬಳೆ, ನೆಕ್ ಲೇಸ್, 2 ಉಂಗುರ ಇವುಗಳನ್ನು ಹಾಕಿ ಮದುವೆ ಮಾಡಿಕೊಟ್ಟಿರುತ್ತಾರೆ ಮತ್ತು

1 ನೇ ಆರೋಪಿ ಸುಪ್ರೀತನಿಗೆ ಕೊರಳ ಚಿನ್ನದ ಸರವನ್ನು ಹಾಕಿರುತ್ತಾರೆ. ಕಾವ್ಯಶ್ರೀ ಮತ್ತು 1 ನೇ ಆರೋಪಿ ಇವರ ಮದುವೆಯನ್ನು ದಿಃ 04.03.2013 ರಂದು ಹಾಸನ ಜಿಲ್ಲೆಯ ಹಳೇಬಿಡಿನ ಶ್ರೀ ರಾಮದೇವರ ದೇವಸ್ಥಾನದಲ್ಲಿ ಮಾಡಿಕೊಟ್ಟಿರುತ್ತಾರೆ. ಮದುವೆಯಾದ ನಂತರ ಚಾಸಾ.1 ಕಾವ್ಯಶ್ರೀ ತನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ. ಮದುವೆಯಾದ ನಂತರ ಕಾವ್ಯಶ್ರೀ ಗಂಡ 1 ನೇ ಆರೋಪಿಯ London ಗೆ ಹೋಗಬೇಕಾಗಿ ಬಂದಿರುವುದರಿಂದ ಅವನ ಜೊತೆ ಹೋಗಲು ಆಕೆಯ ಗಂಡನ ಮನೆಯವರು ಕಳುಹಿಸಿರುವುದಿಲ್ಲ. ಕಾವ್ಯಶ್ರೀಯು ಅವಳ ಅತ್ತೆ ಮಾವನ ಜೊತೆಯಲ್ಲಿ ಅವರ ಮನೆಯಲ್ಲಿ ಇದ್ದಳು. ಕಾವ್ಯಶ್ರೀಯು ವರದಕ್ಷಿಣೆ ತರಲಿಲ್ಲ ಎನ್ನುವ ಕಾರಣಕ್ಕೆ ಅವಳನ್ನು ಅವಳ ಗಂಡನ ಜೊತೆ London ಗೆ ಕಳುಹಿಸಿರುವುದಿಲ್ಲ. ನಂತರ 1 ವರ್ಷವಾದ ಮೇಲೆ ಕಾವ್ಯಶ್ರೀಯು ತಾನು ತನ್ನ ಗಂಡನ ಜೊತೆ ಹೋಗಲೇ ಬೇಕು ಎಂದು ಅವಳ ಅತ್ತೆ ಮಾವನ ಕೈ ಕಾಲು ಹಿಡಿದು ಕೇಳಿಕೊಂಡಿದ್ದರಿಂದ ಅವರು ಅವಳನ್ನು London ಗೆ ಕಳುಹಿಸಿಕೊಟ್ಟಿರುತ್ತಾರೆ. ಕಾವ್ಯಶ್ರೀಗೆ London ನಲ್ಲಿ ಇದ್ದಾಗ 2 ರಿಂದ 4 ಆರೋಪಿಗಳು ಫೋನ್ ಮಾಡಿ ಕಿರುಕುಳ ಕೊಡುತ್ತಿದ್ದರು ಮತ್ತು ಗಂಡ ಹೆಂಡತಿ ಸರಿಯಾಗಿ ಇರಲು ಬಿಡುತ್ತಿರಲಿಲ್ಲ ಎಂದು ನನಗೆ ಕಾವ್ಯಶ್ರೀ ತಿಳಿಸಿರುತ್ತಾಳೆ.

2. ನಂತರ London ನಿಂದ ಕಾವ್ಯಶ್ರೀ ಮತ್ತು 1 ನೇ ಆರೋಪಿ ಚಿಕ್ಕಮಗಳೂರಿಗೆ ಬಂದಿರುತ್ತಾರೆ. ಚಿಕ್ಕಮಗಳೂರಿನಲ್ಲಿಯು ಸಹ ಗಲಾಟೆಯಾಗಿದ್ದು ಆರೋಪಿಗಳ ವಿರುದ್ಧ ಕಾವ್ಯಶ್ರೀ

ಚಿಕ್ಕಮಗಳೂರಿನ ನಗರ ಠಾಣೆಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರು ಠಾಣೆಯಲ್ಲಿ ರಾಜೀಯಾಗಿ ನಂತರ ನಾವೆಲ್ಲರು ಸೇರಿ ಕಾವ್ಯಶ್ರೀಯನ್ನು ಅವಳ ಗಂಡನ ಮನೆಗೆ ಕಳುಹಿಸಿರುತ್ತೇವೆ. ನಂತರ ಕಾವ್ಯಶ್ರೀ ಮತ್ತು ಅವಳ ಗಂಡ 1 ನೇ ಆರೋಪಿಯು ಬೆಂಗಳೂರಿಗೆ ಹೋಗಿ ವಾಸ ಮಾಡಿರುತ್ತಾರೆ. ಆ ಸಮಯದಲ್ಲಿ ಕಾವ್ಯಶ್ರೀಯು ಗರ್ಭಾವತಿಯಾಗಿರುತ್ತಾಳೆ. ನಂತರ ನಾವೆಲ್ಲರು ಅವಳ ಸೀಮಂತವನ್ನು ಮಾಡಿ ಕಾವ್ಯಶ್ರೀಯನ್ನು ಚಿಕ್ಕಮಗಳೂರಿಗೆ ಕರೆದುಕೊಂಡು ಬಂದಿರುತ್ತೇವೆ. ನಂತರ ಕಾವ್ಯಶ್ರೀಯು ಒಂದು ಗಂಡು ಮಗುವಿಗೆ ಜನ್ಮ ನೀಡಿರುತ್ತಾಳೆ ಮತ್ತು 9 ತಿಂಗಳು ಕಾಲ ತನ್ನ ತಂದೆಯ ಮನೆಯಲ್ಲಿ ಇರುತ್ತಾಳೆ. ನಂತರ ಅವಳನ್ನು ಬೆಂಗಳೂರಿನಲ್ಲಿ ಇರುವ ಅವಳ ಗಂಡನ ಮನೆಗೆ ಕಳುಹಿಸಿಕೊಟ್ಟಿರುತ್ತೇವೆ.

3. ಒಂದು ದಿನ 2017 ರಲ್ಲಿ ಪಿರ್ಯಾದಿ ಕಾವ್ಯಶ್ರೀ ಯ ತಂಗಿಯ ಮಗುವಿನ Birthday ಇದ್ದು ಮಗುವಿಗೆ gift ಕೊಡಿಸುವ ವಿಚಾರದಲ್ಲಿ ಕಾವ್ಯಶ್ರೀ ಮತ್ತು 1 ನೇ ಆರೋಪಿ ಜಗಳವಾಡಿರುತ್ತಾರೆ. ಜಗಳದ ಸಮಯದಲ್ಲಿ 1 ನೇ ಆರೋಪಿಯು ಕಾವ್ಯಶ್ರೀಯು ಕುತ್ತಿಗೆಗೆ ವೈರ್ ನ್ನು ಬಿಗಿದು ಕೊಲೆ ಮಾಡುವ ಉದ್ದೇಶದಿಂದ ಗಾಯ ಮಾಡಿದ್ದು ಅವಳಿಗೆ Victoria ಆಸ್ಪತ್ರೆಗೆ ಸೇರಿಸಲಾಗಿತ್ತು. ನಂತರ ಪಿರ್ಯಾದಿ ಕಾವ್ಯಶ್ರೀ 1 ನೇ ಆರೋಪಿಯ ಮೇಲೆ ಬೆಂಗಳೂರಿನಲ್ಲಿ ದೂರು ನೀಡಿರುತ್ತಾಳೆ. ಸದರಿ ದೂರು ಕೂಡ ಠಾಣೆಯಲ್ಲಿ ರಾಜೀಯಾಗಿ ಪಿರ್ಯಾದಿ ಕಾವ್ಯಶ್ರೀಯನ್ನು 1 ನೇ ಆರೋಪಿಯ ತಂದೆ ತಾಯಿಯಾದ 2 ಮತ್ತು 3 ನೇ ಆರೋಪಿಗಳ

ಮನೆಯಾದ ಚಿಕ್ಕಮಗಳೂರಿನಲ್ಲಿ ಬಿಟ್ಟಿದ್ದರು. ಆ ಸಮಯದಲ್ಲಿ ಪಿರ್ಯಾದಿ ಕಾವ್ಯಶ್ರೀಯು ಚಿಕ್ಕಮಗುಳೂರಿನ ಒಂದು ಕಾಲೇಜಿಗೆ ಉಪನ್ಯಾಸಕಿಯಾಗಿ ಹೋಗುತ್ತಿದ್ದರು. ನಂತರ ಪಿರ್ಯಾದಿ ಕಾವ್ಯಶ್ರೀಗೆ ಅವಳ ಅತ್ತೆ ಮಾವನ ಮನೆಯಲ್ಲಿಯು ಸಹ ವರದಕ್ಷಿಣೆಯ ವಿಚಾರವಾಗಿ ಕಿರುಕುಳ ಕೊಡುತ್ತಿದ್ದರು ಎಂಬ ವಿಷಯವನ್ನು ಪಿರ್ಯಾದಿ ಕಾವ್ಯಶ್ರೀಯ ಹೇಳಿರುತ್ತಾಳೆ.

4. ದಿಃ 27.09.2017 ರಂದು ಮಧ್ಯಾಹ್ನ 12.30 ಗಂಟೆಗೆ ಪಿರ್ಯಾದಿ ಕಾವ್ಯಶ್ರೀಯು ಕಾಲೇಜಿನಿಂದ ಊಟಕ್ಕೆ ತನ್ನ ಅತ್ತೆ ಮಾವನ ಮನೆಗೆ ಬಂದಿದ್ದು ಆ ಸಮಯದಲ್ಲಿ ನಾನು ಸಹ ಅವರು ಮನೆಗೆ ಹೋಗಿದ್ದೆನು. ಆಗ ಅವರ ಮನೆಯಲ್ಲಿ ಗಲಾಟೆಯಾಗುತ್ತಿತ್ತು. ಪಿರ್ಯಾದಿ ಕಾವ್ಯಶ್ರೀಗೆ ಅವಳ ಅತ್ತೆ ಮಾವ ಅಂದರೆ ಆರೋಪಿ 2 ಮತ್ತು 3 ಪಿರ್ಯಾದಿ ಕಾವ್ಯಶ್ರೀಗೆ ಎಡಕೈಗೆ ಮತ್ತು ಬಲಕಾಲಿಗೆ ಚಾಕುವಿನಿಂದ ಬರೇ ಹಾಕಿದ್ದರು. ಚಾಕುವನ್ನು 2 ನೇ ಆರೋಪಿ ಹಿಡಿದುಕೊಂಡಿದ್ದರು ಮತ್ತು Mobile Charger ವೈರ್ ನಿಂದ ಅವಳ ಕುತ್ತಿಗೆಗೆ ಬಿಗಿದಿದ್ದರು. ನಂತರ ನಾನು ಸದರಿ ಪಿರ್ಯಾದಿ ಕಾವ್ಯಶ್ರೀಯನ್ನು ಕರೆದುಕೊಂಡು ನನ್ನ ಸ್ಕೂಟಿಯ ಮೇಲೆ ಅವಳನ್ನು ಕೂರಿಸಿಕೊಂಡು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲು ಮಾಡಿರುತ್ತೇನೆ. ನಂತರ ವಿಷಯವನ್ನು ಪಿರ್ಯಾದಿ ಕಾವ್ಯಶ್ರೀಯವರ ತಂದೆ ತಾಯಿಗೆ ಪೋನ್ ಮಾಡಿ ತಿಳಿಸಿರುತ್ತೇನೆ. ನಂತರ ಪಿರ್ಯಾದಿ ಕಾವ್ಯಶ್ರೀಯ ತಂದೆ ತಾಯಿ ಬಂದು ಅವಳನ್ನು ನೋಡಿ ಆರೋಪಿಗಳ ವಿರುದ್ಧ ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತಾರೆ. ಈ ಕುರಿತಂತೆ ನಾನು ಪೊಲೀಸರ ಮುಂದೆ

ಹೇಳಿಕೆ ನೀಡಿರುತ್ತೇನೆ.

5. ಪಿರ್ಯಾದಿ ಕಾವ್ಯಶ್ರೀಗೆ ಆರೋಪಿಗಳು ಅವರ ಮನೆಯಲ್ಲಿ ವರದಕ್ಷಿಣೆಯ ವಿಚಾರವಾಗಿ ಅವಳಿಗೆ ಕಿರುಕುಳ ನೀಡಿದ್ದು ನಂತರ ದಿಃ 27.09.2017 ರಂದು ಪಿರ್ಯಾದಿ ಕಾವ್ಯಶ್ರೀಯ ಅತ್ತೆ ಮಾವ ಅಂದರೆ 2 ಮತ್ತು 3 ನೇ ಆರೋಪಿಗಳು ಅವಳ ಕೈ ಮತ್ತು ಕಾಲಿಗೆ ಚಾಕುವಿನಿಂದ ಬರೇ ಹಾಕಿ, ಮೊಬೈಲ್ ಚಾರ್ಜರ್ ವೈರ್ ನಿಂದ ಅವಳ ಕುತ್ತಿಗೆಗೆ ಬಿಗಿದು ಕೊಲೆ ಮಾಡುವ ಪ್ರಯತ್ನ ಪಟ್ಟಿದ್ದು ಸದರಿ ಆರೋಪಿಗಳು ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳೇ ಆಗಿರುತ್ತಾರೆ.

6. 4 ನೇ ಆರೋಪಿಯಾದ ಶೀಲಾ ಇವರು 1 ರಿಂದ 3 ನೇ ಆರೋಪಿಗಳಿಗೆ ಪೋನ್ ಮಾಡಿ ಪಿರ್ಯಾದಿ ಕಾವ್ಯಶ್ರೀ ಮನೆಯಿಂದ ಹೆಚ್ಚಿನ ವರದಕ್ಷಿಣೆ ಹಣ ತರಿಸಿ ಎಂದು ಅವರಿಗೆ ಹೇಳುತ್ತಿದ್ದಳು ಎಂದು ಪಿರ್ಯಾದಿ ಕಾವ್ಯಶ್ರೀ ನನಗೆ ಹೇಳಿರುತ್ತಾಳೆ. 4 ನೇ ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದು ಅವಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು ಶ್ರೀ ಐ.ಎಸ್.ಟಿ. ವಕೀಲರಿಂದ – ಆರೋಪಿತರ ಪರವಾಗಿ</u>

7. ಆರೋಪಿ ಪರ ವಕೀಲರು ಕಲಂ 231(2) Cr.P.C ಅರ್ಜಿ ಹಾಕಿದ್ದು ಮೇಲ್ಕಾಣಿಸಿದ ಪಾಟೀ ಸವಾಲನ್ನು ಚಾಸಾ.9, 10, 12, 13 ಇವರುಗಳು ಮುಖ್ಯವಿಚಾರಣೆಯಾದ ನಂತರ ಮಾಡುವುದಾಗಿ ವಿನಂತಿಸಿಕೊಂಡಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.